ದಾರಿಯಲಿ' ಎನ್ನುವ ಹಾಡನ್ನೆತ್ತಿಕೊಂಡು ಎಲ್ಲರ ಗಮನ ಸೆಳೆದಳು. ಹಾಡಿನ ಮೊದಲನೆಯ ಸಾಲೊಂದೇ ಅವಳಿಗೆ ಗೊತ್ತಿತ್ತು. ಅದನ್ನೇ ಅವಳು ಗಂಟಲೆತ್ತಿ ಹಾಡುವುದನ್ನು ನೋಡಿ ಆ ಯುವಕನಿಗೆ ಯಾರೋ ಆ ಸಾಲನ್ನ ತಡೆ ರಹಿತವಾಗಿ ಎರಡು ಸಾವಿರಬಾರಿ ಹೇಳಲು ಪಣ ಒಡ್ಡಿರಬೇಕು ಅನಿಸಿತು. ಪಣ ಕಟ್ಟಿದವನು ಯಾರೋ ಗೊತ್ತಿಲ್ಲ, ಆದರೆ ಅವನು ಸೋಲುತ್ತಾನೆ ಎಂದು ಲೆಕ್ಕ ಹಾಕಿದ. ಅವನ ನೋಟದಿಂದಲೇ ಅವನ ಅಸಹನೆ ಮಹಿಳೆಗೆ ಅರ್ಥವಾಗುತ್ತಿತ್ತು. ಮಕ್ಕಳನ್ನು ಹತ್ತಿರ ಕರೆದು ಒಂದು ಕತೆ ಹೇಳುತ್ತೇನೆ ಕೇಳಿ ಎಂದಳು.

ಮಕ್ಕಳ ದೃಷ್ಟಿಯಲ್ಲಿ ಅವಳು ಒಳ್ಳೆಯ ಕತೆಗಾರ್ತಿಯಾಗಿರಲಿಲ್ಲ. ಆದರೂ ಅವರು ಅವಳ ಹತ್ತಿರ ಸರಿದರು. ಆಕೆಗೆ ತಾನು ಹೇಳುವ ಕತೆಯಲ್ಲಿ ಬಹಳ ನಂಬಿಕೆ. ಕತೆಯನ್ನು ಹೇಳುವಾಗ ಆಕೆಗೆ ತುಂಬಾ ಆತ್ಮವಿಶ್ವಾಸ, ಸಣ್ಣ ದನಿಯಲ್ಲಿ ಹೇಳುತ್ತಾಳೆ. ಆದರೆ ಮಕ್ಕಳು ಸಿಡುಕುತ್ತ ಪದೇ ಪದೇ ಪ್ರಶ್ನೆ ಹಾಕುವಾಗ ಅವಳಿಗೆ ತೊಡಕೆನಿಸುತ್ತಿತ್ತು. ಈಗ ಆಕೆ ಎತ್ತಿಕೊಂಡ ಕತೆಯಲ್ಲಿ ಸಾಹಸವಿರಲಿಲ್ಲ, ಅದು ಕುತೂಹಲ ಹುಟ್ಟಿಸದ ಒಂದು ಸರಳ ಕತೆ. ಆ ಕತೆಯಲ್ಲಿ ಒಬ್ಬಳು ಹುಡುಗಿ ಬರುತ್ತಾಳೆ. ಬಹಳ ಒಳ್ಳೆಯ ಹುಡುಗಿ. ಆದ್ದರಿಂದ ಅವಳೆಂದರೆ ಎಲ್ಲರಿಗೂ ವಿಶ್ವಾಸ. ಒಮ್ಮೆ ಅವಳ ಮೇಲೆ ಸೊಕ್ಕಿದ ಗೂಳಿಯೊಂದು ನುಗ್ಗಿದಾಗ ಆಕೆ ಒಳ್ಳೆಯ ಹುಡುಗಿಯೆಂದು ಜನ ರಕ್ಷಿಸುತ್ತಾರೆ.

'ಅಂದ್ರೆ, ಅವಳು ಒಳ್ಳೆ ಹುಡುಗಿ ಆಗಿರದಿದ್ದರೆ ಜನ ಕಾಪಾಡುತ್ತಿರಲಿಲ್ಲ ಅನ್ನು!' ಎಂದು ಇಬ್ಬರು ಹುಡುಗಿಯರಲ್ಲಿ ದೊಡ್ಡವಳು ಕೇಳಿದಳು. ಆ ಯುವಕ ಕೂಡ ಅದೇ ಪ್ರಶ್ನೆ ಕೇಳಬೇಕೆಂದುಕೊಂಡಿದ್ದ.

'ನಿನ್ನ ಸಂದೇಹ ಸರಿ.' ಚಿಕ್ಕಮ್ಮ ಅರೆಮನಸ್ಸಿನಿಂದ ಒಪ್ಪಿಕೊಂಡಳು. 'ಆದರೆ ಆ ಹುಡುಗಿ ಅವರಿಗೆ ಇಷ್ಟವಾಗಿರದಿದ್ದರೆ ಅಷ್ಟು ಬೇಗನೆ ಕಾಪಾಡಲು ನುಗ್ಗುತ್ತಿರಲಿಲ್ಲ.' ಹುಡುಗಿಗೆ ಚಿಕ್ಕಮ್ಮನ ಸಮಜಾಯಿಶಿ ಒಪ್ಪಿಗೆಯಾಗದೆ, 'ನಾನು ಕೇಳಿದ ಕತೆಗಳಲ್ಲೆಲ್ಲ ಈ ಕತೆಯಷ್ಟು ಪೆದ್ದು ಕತೆ ಮತ್ತೊಂದಿಲ್ಲ' ಎಂದಳು. ಅದೊಂದು ಪೆದ್ದು ಕತೆ ಎನ್ನುವುದು ಅವಳಿಗೆ ಖಾತ್ರಿಯಾಗಿತ್ತು.

ಹುಡುಗ ಸಿರಿಲ್‌ಗೂ ಹಾಗೇ ಅನ್ನಿಸುತ್ತಿತ್ತು. 'ಕತೆಯನ್ನ ಶುರುವಿನಲ್ಲಷ್ಟೆ ಕೇಳಿದೆ. ಬುರ್ನಾಸು ಕತೆ' ಎಂದ. ಚಿಕ್ಕ ಹುಡುಗಿ ಕತೆಯ ಮೇಲೆ ಟಿಪ್ಪಣಿ ಮಾಡದೆ ಆಗಲೇ ಸಣ್ಣ ದನಿಯಲ್ಲಿ ಮತ್ತೆ ರಾಗವಾಗಿ, 'ಮಂಡಾಲೆ ದಾರಿಯಲಿ' ಶುರುಮಾಡಿದ್ದಳು. ಮೂಲೆಯಲ್ಲಿ ಕೂತಿದ್ದ ಯುವಕ, 'ನೀವು ಒಳ್ಳೆ ಕತೆಗಾರ್ತಿಯಲ್ಲ ಅಂದ್ಕೊಳ್ತೇನೆ' ಎಂದುಬಿಟ್ಟ. ಆ ಟಿಪ್ಪಣಿಯನ್ನು ನಿರೀಕ್ಷೆ ಮಾಡಿರದಿದ್ದ ಮಹಿಳೆಗೆ ತನ್ನನ್ನ ಸಮರ್ಥಿಸಿಕೊಳ್ಳಬೇಕಿತ್ತು. ಆದ್ದರಿಂದ ತುಸು ಗೊಂದಲಗೊಂಡಳು. ತಕ್ಷಣ ದೃಢವಾಗಿ, 'ಮಕ್ಕಳಿಗೆ ಕತೆ ಹೇಳುವುದೆಂದರೆ ಸುಲಭದ ಕೆಲಸವಲ್ಲ, ಅವರಿಗೆ ಕತೆ ಅರ್ಥವೂ ಆಗಬೇಕು, ಅದರ ಬೆಲೆಯನ್ನೂ ಅವರು ಕಟ್ಟುವಂತಿರಬೇಕು, ಗೊತ್ತಾ?' ಎಂದಳು.

ಇದನ್ನು ತಾನು ಒಪ್ಪಿಕೊಳ್ಳೋದಿಲ್ಲ ಎಂದ ಯುವಕ. ಆಕೆಗೆ ಯುವಕನ ಬಾಯಿ ಮುಚ್ಚಿಸಬೇಕಾಗಿ ಬಂತು. 'ನಿಮಗೆ ಕತೆ ಹೇಳುವ ಮನಸ್ಸಿತ್ತೇನೋ!' ಎಂದು ಉದ್ಗಾರವೆತ್ತಿದಳು.

